Regd. No. M 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂವತ್ಸರ 30 ಸಂಚಿಕೆ 84] ಮಂಗಳವಾರ 26—11—46 [ಬಿಡಿ ಪ್ರತಿ 3 ಪೈ

ಮದರಾಸು ಪ್ರಾಂತ್ಯದಲ್ಲಿ ವರ್ಷಕ್ಕೆ ಒಬ್ಬರಿಗೆ 5 ಗಜ ಮಿಲ್ ಬಟ್ಟೆ

ವರ್ಷಕ್ಕೆ 5 ಗಜ ಮಿಲ್ಲು ಬಟ್ಟೆ

ಮದರಾಸು ನ 25 — ಮದರಾಸು ಸರಕಾರವು ಆ ಪ್ರಾಂತ್ಯದಲ್ಲಿ ಪ್ರತಿಯೊಬ್ಬರಿಗೂ 5 ಗಜ ಬಟ್ಟೆಯನ್ನೂ ಮಕ್ಕಳಿಗೆ 2 ಗಜ ಬಟ್ಟೆಯನ್ನು ನಿಗದಿ ಮಾಡಿದ್ದಾರೆ. ಈ ರೀತಿ ಒಟ್ಟೆ ರೇ ಷನ್ ಡಿಸೆಂಬರ್ 1 ರಿಂದ ಜಾರಿಗೆ ಬರುವುದು.

ಸಂಸ್ಥಾನಗಳ ಏಕ್ಯತೆ

ಮೀರತ್ ನ 24 — ಭಾರತದಲ್ಲಿರುವ 562 ಸಂಸ್ಥಾನಗಳೂ ಒಟ್ಟಾಗಿ ಬಂದು ಫೆಡರೇಷನ್ನನ್ನು ಸ್ಥಾಪಿಸಿ ಭಾವೀ ಭಾರತ ಸರಕಾರದೊಡನೆ ತಮ್ಮ ಭವಿಷ್ಯ ವಿಷಯ ಸಂಧಾನ ನಡೆಸಲು ಯೋಜನೆ ನಡೆಯುತ್ತಿರುವ ವಿಷಯವನ್ನು ಡಾ|| ಪಟ್ಟಾಭಿಯವರು ತಿಳಿಯಪಡಿಸಿದ್ದಾರೆ.

ಸಂತಾಪ ಸಭೆ

ಮೈಸೂರು ನ 25 — ರಾಜಧಾನಿಯ ಪತ್ರಿಕೋದ್ಯೋಗಿ ಸಂಘದವರು ಸಭೆ ನಡೆಸಿ ಶ್ರೀ ಕೈಲಾಸಂರವರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸಿರುವರು.

ಮಂತ್ರಿಮಂಡಲದಲ್ಲಿ ಸೊಸೆ

ಜಿಂದ್ ಸಂಸ್ಥಾನಾಧೀಶರು ಅಲ್ಲಿಯ ಮಂತ್ರಿಮಂಡಲಕ್ಕೆ ತಮ್ಮ ಸೊಸೆಯನ್ನೇ ನೇಮಿಸಿರುವ ವಿಷಯವನ್ನು ಡಾ|| ಪಟ್ಟಾಭಿಯವರು ಕಾಂಗ್ರೆಸ್ ನಗರದಲ್ಲಿ ತಿಳಿಯಪಡಿಸಿದ್ದಾರೆ.

ವಿಜ್ಞಾನದ ವೈಖರಿ

ಮೈಸೂರು ನ 26 — ನಿನ್ನೆಯ ದಿವಸ ಮಧ್ಯಾಹ್ನ ಫೈಕ್ ಆರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಪ್ರಕೃತಿ ಸೌಂದರ್ಯದ ವಿಷಯದಲ್ಲಿ ಮಾಡಿದ ಭಾಷಣದಲ್ಲಿ ನೂತನ ವಿಜ್ಞಾನದಿಂದ ಪ್ರಪಂಚದ ಪ್ರಗತಿ ಸಾಧಿಸುತ್ತಿರುವುದೆಂದು ತಿಳಿಸಿದರು.

ತಿರುಪತಿ ದೇವಾಲಯಕ್ಕೆ ಹರಿಜನ ಪ್ರವೇಶ

ತಿರುಪತಿ — ತಿರುಮಲೆ ತಿರುಪತಿ ದೇವಾಸ್ಥಾನ ಕಮಿಟಿಯವರೂ ಕಳೆದ ಶನಿವಾರ ನಡೆಸಿದ ಮಾಟಿಂಗಿನಲ್ಲಿ ತಿರುಪತಿ ದೇವಾಲಯಗಳಿಗೆ ಹರಿಜನ ಪ್ರವೇಶಾನುಕೂಲ ಕೊಡಬೇಕೆಂದು ನಿರ್ಣಯಿಸಿದರು.

ಶಾಂತಿ ಸಂಘಗಳು

ಶಾಂಗಂಜ್ ನ 23 — ಗಾಂಧೀಜಿ ಎದುರಿನಲ್ಲಿ 3 ಗಂಟೆಗಳ ಕಾಲ ಚರ್ಚೆ ನಡೆಸಿ ನಂತರ ಅಲ್ಲಿಯ ಹಿಂದೂ ಮುಸ್ಲಿಂಮರು ಶಾಂತಿ ಸಂಘ ಸ್ಥಾಯಿ ಸೌಹಾರ್ದ್ಯದಿಂದ ನೆಲಸಲು ನಿಶ್ಚಯಿಸಿರುವರು.

ಓಟ್ಟು ಕೊಡುವುದು ಬೇಡ

ಬಾರ್ಡೂಂ ನ 25 — ಸುಡಾನಿನ ಒಬ್ಬ ಮುಖಂಡರಾದ ಮೆಹಡಿ ಪಾಷಾರವರು ಲಂಡನ್ನಿಗೆ ವಿಮಾನದಲ್ಲಿ ಹೋಗಿ ಬ್ರಿಟಿಷ್ ಮುಖ್ಯಮಂತ್ರಿ ಅಟ್ಲಿಯವರನ್ನು ಕಂಡು ಈಜಿಪ್ಟಿನೊಂದಿಗೆ ತಮ್ಮ ದೇಶ ಒಟ್ಟುಕೂಡುವಿಕೆ ಬೇಡವೆಂದು ತಿಳಿಸುವರಂತೆ.

ಪೂರ್ತಾ ಸಂಸಾರದ ಆತ್ಮಹತ್ಯ

ಪ್ಯಾರಿಸ್ ನ 24— ಕ್ಲಿಬರ್ ಡಿಮಟ್ರೈಂ ಎಂಬಾತನೂ ಆತನ ಪತ್ನಿಯೂ ಭಾರಿ ಕುಡುಕರು. ಅದಕ್ಕಾಗಿ ಸರಕಾರದವರು ಅವರ 7 ಮಕ್ಕಳನ್ನು ತಮ್ಮ ಸುಪರ್ದಿಗೆ ಇಡೆಯಲು ಏರ್ಪಡಿಸಿದರು. ಇದನ್ನು ಕೇಳಿ ಸಂಸಾರದ 9 ಮಂದಿಯೂ ಆತ್ಮಹತ್ಯ ಮಾಡಿಕೊಂಡರು.

ಸರ್ ಮಿರ್ಜಾರವರ ಹೇಳಿಕೆ

ಹೈದರಾಬಾದು ನ 23 — ಇಲ್ಲಿಯ ಮುಖ್ಯ ಮಂತ್ರಿ ಸರ್ ಮಿರ್ಜಾರವರು ಇಲ್ಲಿಯ ಅಧಿಕಾರಿಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಅಡಳಿತ ವರ್ಗದ ಪ್ರಾವೀಣ್ಯತೆ ಮತ್ತು ಜನತೆಯ ಸಂತುಷ್ಟಿ ಇರುವ ಯಾವ ದೊಡ್ಡ ಮಾದಂ ಸಂಸ್ಥಾನಕ್ಕೂ ಭಾವೀ ರಾಜ್ಯಾಂಗ ಘಟನೆಯಲ್ಲಿ ಏನೂ ಭಯ ವಿರುವುದಿಲ್ಲವೆಂದು ತಿಳಿಸಿರುವರು.

ರಷ್ಯಾ ಭಯವಿಲ್ಲ

ಮೆಲ್ಬೊರ್ನ ನ 23 — ಆಸ್ಟ್ರೇಲಿಯಾ ಸೈನ್ಯದ ಮಾಜಿ ಮುಖ್ಯಾಧಿಕಾರಿಯು ರಷ್ಯಾದಿಂದ ಆಸ್ಟ್ರೇಲಿಯಾಕ್ಕೆ ಇನ್ನೂ ಭಯವೇನೂ ಇಲ್ಲವೆಂದಿರುವರು.

ಪರಿಹಾರ ನಿಧಿ

ನವದೆಹಲಿ ನ 23 — ಜಿನ್ನರು ಕೇಂದ್ರ ಮುಸ್ಲಿಂ ಪರಿಹಾರ ನಿಧಿ ಸ್ಥಾಪಿಸಿ ಅದರ ಸದಸ್ಯರನ್ನು ನೇಮಿಸಿರುವರು.

ಮುನಿಸಿಪಲ್ ಮಾಟಿಂಗು

ಮೈಸೂರು ನ 25 — ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ಲಿನ ಮಾಟಿಂಗು ತಾ|| 30 ನೇ ಶನಿವಾರ ಸಂಜೆ 4 ಗಂಟೆಗೆ ನಡೆಯುವುದು.

ಸೈನಿಕರ ವರ್ಗಾ

ನವದೆಹಲಿ ನ 22 — 20 ವರ್ಷಕ್ಕೆ ಕಡಿಮೆ ಸೇವೆ ಮಾಡಿರುವ ಭಾರತ ಸೈನ್ಯದಲ್ಲಿಯ ಬ್ರಿಟಿಷ್ ಅಧಿಕಾರಿಗಳನ್ನು ಬ್ರಿಟಿಷ್ ಸೇನೆಗೆ ವರ್ಗಾಯಿಸುವುದು ಜನವರಿ 1 ನೇ ತಾರೀಖಿನಿಂದ ಪ್ರಾರಂಭಿಸಲಾಗುವುದೆಂದು ಹೇಳಲಾಗಿದೆ.

ಕುದುರೆ ಜೂಜು

ಬೊಂಬಾಯಿ ನ 21 — ಬೊಂಬಾಯಿನ ಕುದುರೆ ಜೂಜು ಡಿಸೆಂಬರು 14 ರಿಂದ ಪ್ರಾರಂಭವಾಗುವುದು.

ಇಬ್ಬರು ಅದೃಷ್ಟ ಶಾಲಿಗಳು

ಕಲ್ಕತ್ತಾ ನ 23 — ಈ ದಿನದ ಕುದುರೆ ಜೂಜಿನಲ್ಲಿ 2 ಟ್ರಿಒಲ್ ಈವೆಂಟು ಟಿಕೀಟುಗಳಿಗೆ ತಲಾ ರೂ 20448-೮-೦ ದೊರೆಯಿತು.

ಆಟಂ ಬಾಂಬಿಗೆ ಸಂಬಂದಿಸಿದ್ದು

ನ್ಯೂಯಾರ್ಕ್ ನ 21 — ತಿರುವಾಂಕೂರಿನಿಂದ ಅಮೇರಿಕಾಕ್ಕೆ ಆಟಂ ಬಾಂಬು ತಯಾರಿಯಲ್ಲಿ ಉಪಯೋಗವಾಗುವ ಕೋರಿಯು ಅದನ್ನು ರವ್ತು ಮಾಡುವುದನ್ನು ನಿರ್ಬಂಧಿಸಿದೆ. ಅಮೇರಿಕಾವು ಬ್ರಿಟನ್ನಿಗೆ ಆಟಂಬಾಂಬು ಸರಬರಾಜು ಮಾಡುವದನ್ನು ನಿರಾಕರಿಸಿದ್ದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಧರ್ಮ ಸಮ್ಮೇಳನ

(ಸ್ವಂ.ಸು. ತಂತಿ)

ಸಿದ್ದಪುರ ನ 25— ಮಹಾಮಹೋಪಾಧ್ಯಾಯ ಶ್ರೀ ಅನಂತಕೃಷ್ಣಶಾಸ್ತ್ರಿಗಳು ದ್ವಾರಕಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾರಾಜರವರನ್ನು ಭೇಟಿ ಮಾಡಿ, ಭಾರತದ ಎಲ್ಲಾ ಮತ್ರಾಧಿಪತಿಗಳ ಸಂಘದ ವಿಷಯವಾಗಿಯೂ, ಮುಸ್ಲಿಂ ರಾಜ್ಯಾಂಗ ರಚನಾ ಸಭೆಯಲ್ಲಿ ಮತದ ಹಕ್ಕಿಗೆ ಬಾಧ್ಯತೆ ಮತ್ತು ಸ್ವಾತಂತ್ರ್ಯ ರಕ್ಷಣೆ ವಿಷಯವಾಗಿಯೂ ಮಾತುಕತೆ ನಡೆಸಿದರು. ಶ್ರೀ ಜಗದ್ಗುರುಗಳವರು ಈ ವಿಷಯದಲ್ಲಿ ತಮ್ಮ ಹೃತ್ಪೂರ್ವಕವಾದ ಸಹಾನುಭೂತಿಯನ್ನೂ ಸಹಕಾರವನ್ನೂ ವ್ಯಕ್ತಪಡಿಸಿದರು.

ಈ ಒಗ್ಗೆ ಅವಶ್ಯಕವಾದ ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಲೂ ಮತ್ತು ರಾಜ್ಯಾಂಗರಚನಾ ಸಭೆಯು ನಡೆಯುವುದಕ್ಕೆ ಮುಂಚಿತವಾಗಿ ಡೆಲ್ಲಿಗೆ ಒಂದು ಪ್ರಾತಿನಿಧ್ಯ ಕಳುಹಿಸಲೂ ಮದರಾಸಿನಲ್ಲಿ ಡಿಸೆಂಬರ್ ಮೊದಲನೆ ವಾರದಲ್ಲಿ ಎಲ್ಲಾ ಮತಾಧಿಪತಿಗಳ ಪ್ರತಿನಿಧಿಗಳ ಸಮ್ಮೇಳನವು ನಡೆಯುವುದು.

ಡಾ|| ಕೋಟ್ನಿಸ್

ಶ್ರೀ ಶಾಂತರಾಂಬರಂ ಅಂತರಾಷ್ಟ್ರೀಯ ಖ್ಯಾತಿಗಳಿಸಿದ ಡಾ|| ಕೋಟ್ನಿಸ್ ಈಗ ತಾನೇ ರಾಜಧಾನಿಯ ನೂತನ ಪುಟ್ಟ ಆಧುನಿಕ ಚಲನ ಚಿತ್ರಮಂದಿರವಾದ ರಾಜ್‌ಕಮಲಿನಲ್ಲಿ ಕಿಕ್ಕಿರಿದ ಜನಸ್ತೋಮದಿಂದ ಎರಡನೇ ವಾರ ಸಾಗುತ್ತಿದೆ. ಒಳ್ಳೇ ಚಿತ್ರ ಒಳ್ಳೇ ಚಿತ್ರಮಂದಿರದಲ್ಲಿ ಪ್ರದರ್ಶಿತ ವಾಗುತ್ತಲಿರುವುದು ಒಂದು ಸಂತೋಷದ ಸುದ್ದಿ. ದೇಶಕ್ಕಾಗಿ ದುಡಿದು ದೇಶ ಸೇವೆಯಲ್ಲಿಯೇ ಮಡಿದ ದೇಶಪ್ರೇಮಿಯೊಬ್ಬನ ವಿಚಾರವಾಗಿ ದೇಶ ಪ್ರೇಮಿ ಯೊಬ್ಬನು ಬರೆದ ಕಥೆಯ ಆಧಾರದ ಮೇಲೆ ದೇಶ ಪ್ರೇಮಿಯೊಬ್ಬನು ತಯಾರಿಸಿದ ಚಿತ್ರವು ದೇಶ ಪ್ರೇಮಿಗಳ ಯಜಮಾನಿಕೆಯಿಂದ ನಡೆಯುತ್ತಿರುವ ಮಂದಿರದಲ್ಲಿ ಪ್ರದರ್ಶಿತವಾಗುವುದಲ್ಲವೇ ಅಶ್ಚರ್ಯ! ಚಿತ್ರವನ್ನು ನೋಡಿದವರೆಲ್ಲರೂ ಕಣ್ಣೀರು ಸುರಿಸಲೇ ಬೇಕು. ಡಾ|| ಕೋಟ್ನಿಸ್ ತನ್ನ ಅಂತ್ಯ ಕಾಲದವರೆಗೂ ಯಾವ ರೀತಿ ಚಿಕಿತ್ಸೆ ನಡೆಸುತ್ತಿದ್ದ ಎಂಬುದನ್ನು ಪ್ರತಿಬಿಂಬಿಸಲಾಗಿದೆ, ತಯಾರಿಕ ಬಹಳ ಚೆನ್ನಾಗಿದೆ. ಅಂತೆಯೇ ಮಂದಿರದ ವ್ಯವಸ್ಥೆ ನಾಜೂಕಾಗಿದೆ. ಸೌಂಡ್ ಸೊಗಸಾಗಿದೆ. ಒಟ್ಟಿನಲ್ಲಿ ಚಿತ್ರದಲ್ಲಿ ಹಾಗೂ ಮಂದಿರದಲ್ಲಿ ಯಾವ ಕೊರತೆಯೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಬ್ಬನೂ ನೋಡತಕ್ಕ ಚಿತ್ರವಾಗಿದೆ. ನೋಡಿಯೇತೀರಬೇಕು. ಡಿಗ್ದರ್ಶಕರು ಇಂತಹ ಎಷ್ಟು ಚಿತ್ರ ತಯಾರಿಸಿದರೂ ಸಂತೋಷವೇ.

ಪ್ರೇಕ್ಷಕ

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1-12-0

ಉತ್ಸವ

ಸ್ವಂ.ಸು.] ಶ್ರೀರಂಗಪಟ್ಟಣ ನ. 25

ಶ್ರೀ ಕಾವೇರಿ ಶ್ರೀನಿವಾಸ ಸ್ವಾಮಿ ದೇವಾಸ್ಥಾನದ ಮಹಾಭಿಷೇಕವನ್ನು ಈ ವರ್ಷದಿಂದ ಒಂದು ತಿಂಗಳ ಮುಂದೆ ಹಾಕಲಾಗುತ್ತೆ. ಆದ್ದರಿಂದ ಈ ವರ್ಷದ ಮೇಲ್ಕಂಡ ದೇವಸ್ಥಾನದ ಉತ್ಸವವು ಮಾಘ ಶುದ್ಧ ಪೌರ್ಣಮಿ ತಾರೀಖು 5-2-47 ರಲ್ಲಿ ನಡೆಯುತ್ತಾದ್ದರಿಂದ ಭಕ್ತಾದಿಗಳು ದಯವಾಡಿಸಬೇಕಾಗಿ ದೇವಸ್ಥಾನದ ಕಾರ್ಯದರ್ಶಿಗಳಾದ ಬಿ. ನಾರಾಯಣರಾಯರವರು ಕೋರುತ್ತಾರೆ.

At Opera ——
5th Glorious Week
Sri Murugan
ಶ್ರೀ ಮುರುಗನ್
ಪೊನ್ನಪ್ಪ ಭಾಗವತರ್, ಕಾಳಿ ಎಕ್ ರತ್ನ, ಮೂಲತಿ, ಜೀವರತ್ನ, ಯೋಗ ಮುಂಗಳಂ ಪಾತ್ರವಹಿಸಿರುವರು
ಮುಂದಿನ ವಿನೋದ ಉತ್ತಮಿ

☞ For Quality Printing
L. N. Press
Sriramp.t, MYSORE

Edited, Printed and Published by M. S Krishna Rao at the Satyavadi Press Chamaraj Agrahr Mysore.

At Ranjit_____ 2nd Houseful Week
ಸೂರಿಯಾ - ಪಹಡಿ ಸನ್ಯಾಲ್ - ಷಾ ನವಾಜ್
ಪಾತ್ರವಹಿಸಿರುವ
ಮೈಕ್ಯಾಕರೂಂ
Mai Kya Karam
ಪ್ರತಿ ದಿನ 3 ಆಟಗಳು .... ಅಮೋಘ ಹಿಂದಿ ಚಿತ್ರ

City Municipal Office
Mysore
Dated 11th Nov. 1946.

M 5 C 204-79 / 46-47

Notification

NOTICE is hereby given to the public that the Municipal Council have resolved to frame Byelaws under Section 51 (1) a of the Mysore City Municipalities Act, for the grading of eggs before they are offered for sale in the city.

Any person having any objection in respect of the above may prefer the same in writing to the undersigned within one month from this date after which no objection will be received.

Copy of the proposed Byelaws may also be seen in the City Municipal Office, the Vice-President's office during the office honrs.

(Sd) A. Krishnamurthy Rao
President in charge

Draft- Bye-Laws For Grading Of Eggs For Sale In The Several Markets Framed Under Section 51 (1) a of the Mysore City Municipalities Act 1933.

1 No person shall sell or offer for sale any egg in any egg market which has not been examined and graded by the egg Grading Officer and certified to by him by affixing the seal with the date, as fit for consumption.

2 Every person before offering for sale any egg in the cityj shall get it examined and graded by the egg Grading section provided for in the Market and certified to as fit for human consumption, after payment of 1½ annas per every hnndred or part of hundred eggs.

3 The Officer in charge of the grading station shall after examining the eggs by the process provided for in the Devara. Market certify them as graded by affixing the prescribed seal with the date of examination and reject such eggs which are either spoiled or unfit for human consnmption.

Any infringement of the bye-laws by any person shall make him liable for conviction to a fine not exceeding Rs. 20. Besides the markei Scrgesnt will have the power to seize such eggs and destroy any egg found on examination to be unfit for human consumption.

Mysore
Dated 11-11-46

(Sd) A. Krishnamurtby Rao
President-in-charge
City Municipal Council